# ಕರ್ನಾಟಕ ಲೋಕಸೇವಾ ಆಯೋಗ

ಸಂಖ್ಯೆ: ಪಿಎಸ್‌ಸಿ 31 ಆರ್‌ಟಿಬಿ–2/23–24 1579

ಲೋಕ ಸೇವಾ ಆಯೋಗದ ಕಛೇರಿ,
"ಉದ್ಯೋಗ ಸೌಧ",
ಬೆಂಗಳೂರು, ದಿನಾಂಕ: 28-04–2023.

ಇವರಿಂದ:–

**ಕಾರ್ಯದರ್ಶಿ,**
ಕರ್ನಾಟಕ ಲೋಕಸೇವಾ ಆಯೋಗ,
"ಉದ್ಯೋಗ ಸೌಧ",
ಬೆಂಗಳೂರು–560001.

ಇವರಿಗೆ:–

**ಸರ್ಕಾರದ ಕಾರ್ಯದರ್ಶಿ,**
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
ವಿಧಾನ ಸೌಧ,
ಬೆಂಗಳೂರು.

ಮಾನ್ಯರೆ,

**ವಿಷಯ**:– ಕರ್ನಾಟಕ ನಾಗರೀಕ ಸೇವಾ (ನೇರ ನೇಮಕಾತಿ) ಸಾಮಾನ್ಯ ನಿಯಮಗಳು 2021 ರಲ್ಲಿ ಗ್ರೂಪ್ ಸಿ ಹುದ್ದೆಗಳಿಗೆ ನಿರ್ದಿಷ್ಟ ಪತ್ರಿಕೆಯನ್ನು ಹಾಗೂ ಅಭ್ಯರ್ಥಿಗಳಿಂದ ಆದ್ಯತೆಯನ್ನು ಪಡೆಯುವ ಬಗ್ಗೆ ತಿದ್ದುಪಡಿಗೊಳಿಸುವ ಕುರಿತು.

**ಉಲ್ಲೇಖ**:– ಸಿಆಸುಇ 43 ಸೇವನೆ 2020, ದಿ:05–03–2021

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಆದೇಶದಲ್ಲಿ ಸರ್ಕಾರವು ಕರ್ನಾಟಕ ನಾಗರೀಕ ಸೇವಾ (ನೇರ ನೇಮಕಾತಿ) ಸಾಮಾನ್ಯ ನಿಯಮಗಳು 2021ನ್ನು ಜಾರಿಗೊಳಿಸಿದ್ದು, ನಿಯಮದಲ್ಲಿ ಗ್ರೂಪ್ 'ಸಿ' ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಗೆ ಸಂಬಂಧಿಸಿದಂತೆ ಪತ್ರಿಕೆ –1 (ಸಾಮಾನ್ಯ ಜ್ಞಾನ) ಮತ್ತು ಪತ್ರಿಕೆ –2 (ಸಾಮಾನ್ಯ ಕನ್ನಡ, ಸಾಮಾನ್ಯ ಇಂಗ್ಲೀಷ್ ಮತ್ತು ಕಂಪ್ಯೂಟರ್ ಜ್ಞಾನ) ಪಠ್ಯಕ್ರಮವನ್ನು ನಿಗದಿಪಡಿಸಲಾಗಿರುತ್ತದೆ.

ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿ ಹಾಗೂ ಆಯ್ಕೆ) (ಸಾಮಾನ್ಯ) ನಿಯಮಗಳು 2006 ಮತ್ತು (ತಿದ್ದುಪಡಿ) ನಿಯಮಗಳು 2015 ರಲ್ಲಿ ಗ್ರೂಪ್ "ಸಿ" ಹುದ್ದೆಗಳನ್ನು ತಾಂತ್ರಿಕ ಹಾಗೂ ತಾಂತ್ರಿಕೇತರ ಹುದ್ದೆಗಳೆಂದು ವರ್ಗೀಕರಿಸಿ, 2006 ರ ನಿಯಮ 2(ಡಿ) ಯಲ್ಲಿ Technical post means a post for which the qualifying examination prescribed is a technical qualification notified as such by the State Government for the purpose of these rules or a post graduate degree or doctorate prescribed as qualifying examination ಎಂದಿರುತ್ತದೆ. ಸರ್ಕಾರದ ಅಧಿಸೂಚನೆ ಸಂ: ಡಿಪಿಎಆರ್ 52 ಎಸ್‌ಸಿಆರ್ 2008, ದಿ.05–03–2009 ಹಾಗೂ ಡಿಪಿಎಆರ್ 63 ಎಸ್‌ಸಿಆರ್ 2011, ದಿ:21–09–2011 ರಲ್ಲಿ ತಾಂತ್ರಿಕ ವಿದ್ಯಾರ್ಹತೆಗಳನ್ನು ನಿಗದಿಪಡಿಸಲಾಗಿತ್ತು.

ಮುಂದುವರೆದು, ಸರ್ಕಾರದ ಅಧಿಸೂಚನೆ ಸಂ ಡಿಪಿಎಆರ್ 112 ಎಸ್‌ಸಿಆರ್ 2013, ದಿ:31–12–2015 ರ ನಿಯಮ 06 (1ಎ) ರಲ್ಲಿ ಗ್ರೂಪ್ ಸಿ **ತಾಂತ್ರಿಕ ಹುದ್ದೆಗಳಿಗೆ** ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಪತ್ರಿಕೆ – 1 (ಸಾಮಾನ್ಯ ಪತ್ರಿಕೆ) ಮತ್ತು ಪತ್ರಿಕೆ –2 (ನಿರ್ದಿಷ್ಟ ಪತ್ರಿಕೆ) ಹಾಗೂ ಉಪ ನಿಯಮ 06 (2ಎ) ರಲ್ಲಿ **ತಾಂತ್ರಿಕೇತರ ಹುದ್ದೆಗಳಿಗೆ** ಸಾಮಾನ್ಯ ಜ್ಞಾನ ಮತ್ತು ಸಂವಹನ ಪತ್ರಿಕೆಯನ್ನು ನಿಗದಿಪಡಿಸಲಾಗಿತ್ತು.

- - -2

ದಿ:05-03-2021 ರಿಂದ ಜಾರಿಯಲ್ಲಿರುವ ಕರ್ನಾಟಕ ನಾಗರೀಕ ಸೇವಾ (ನೇರ ನೇಮಕಾತಿ) ಸಾಮಾನ್ಯ ನಿಯಮಗಳು 2021 ರಲ್ಲಿ ಈ ಹಿಂದೆ ತಾಂತ್ರಿಕ ಹಾಗೂ ತಾಂತ್ರಿಕೇತರ ಹುದ್ದೆಗಳೆಂದು ವರ್ಗೀಕರಿಸಲಾದ ಹುದ್ದೆಗಳನ್ನು ಒಟ್ಟುಗೂಡಿಸಿ ಗ್ರೂಪ್ ಸಿ ಹುದ್ದೆಗಳೆಂದು ವರ್ಗೀಕರಿಸಿ ಪತ್ರಿಕೆ -1 (ಸಾಮಾನ್ಯ ಜ್ಞಾನ) ಮತ್ತು ಪತ್ರಿಕೆ-2 (ಸಾಮಾನ್ಯ ಕನ್ನಡ, ಸಾಮಾನ್ಯ ಇಂಗ್ಲೀಷ್ ಹಾಗೂ ಕಂಪ್ಯೂಟರ್ ಜ್ಞಾನ) ಏಕರೂಪ ಪಠ್ಯಕ್ರಮವನ್ನು ನಿಗದಿಪಡಿಸಲಾಗಿರುತ್ತದೆ.

ಆದರೆ ಪತ್ರಿಕೆ-02 ಕ್ಕೆ ಸಂಬಂಧಿಸಿದಂತೆ ತಾಂತ್ರಿಕ ವಿದ್ಯಾರ್ಹತೆಯುಳ್ಳ ಹುದ್ದೆಗಳ ನೇಮಕಾತಿ ಸಂಬಂಧ ಹಲವು ಅಭ್ಯರ್ಥಿಗಳಿಂದ ತಾಂತ್ರಿಕ ಹುದ್ದೆಗಳಾದ ಕಿರಿಯ ಅಭಿಯಂತರರು, ಕಿರಿಯ ಆರೋಗ್ಯ ಸಹಾಯಕರು ಹಾಗೂ ಎಲೆಕ್ಟ್ರೀಷಿಯನ್ ಇನ್ನೂ ಹಲವು ಹುದ್ದೆಗಳ ಕಾರ್ಯನಿರ್ವಹಣೆ ಮಾಡಲು ಅಭ್ಯರ್ಥಿಗಳನ್ನು ಆಯ್ಕೆ ಮಾಡಬೇಕಾದಲ್ಲಿ ನಿಗದಿಪಡಿಸಲಾದ ವಿದ್ಯಾರ್ಹತೆಯ ವಿಷಯಗಳನ್ನೊಳಗೊಂಡ ಹಾಗೂ ಕಾರ್ಯನಿರ್ವಹಿಸುವ ಕ್ಷೇತ್ರದ ವಿಷಯವಿರುವ ಒಂದು ನಿರ್ದಿಷ್ಟ ಪತ್ರಿಕೆಯನ್ನು ನಿಗದಿಪಡಿಸಿದ್ದಲ್ಲಿ ತಾಂತ್ರಿಕ ಹುದ್ದೆಗಳಿಗೆ **ನಿರ್ದಿಷ್ಟ ಕ್ಷೇತ್ರದ ಅರಿವಿರುವ** ಅರ್ಹ ಅಭ್ಯರ್ಥಿಗಳು ಲಭ್ಯವಾಗುತ್ತಾರೆಂದು ತಿಳಿಸಿ ತಾಂತ್ರಿಕ ಹುದ್ದೆಗಳಿಗೆ ನಿರ್ದಿಷ್ಟ ಪತ್ರಿಕೆಯನ್ನು ನಿಗದಿಪಡಿಸಿ ಎಂದು ಹಲವು ಮನವಿಗಳು ಸ್ವೀಕೃತವಾಗುತ್ತಿವೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆ ಮೂಲಕ ನೇರ ನೇಮಕಾತಿ ಹಾಗೂ ಆಯ್ಕೆ) (ಸಾಮಾನ್ಯ) ನಿಯಮಗಳು 2006 ಮತ್ತು (ತಿದ್ದುಪಡಿ) ನಿಯಮಗಳು 2015 ರಲ್ಲಿದ್ದಂತೆ ಪ್ರಸ್ತುತ ಜಾರಿಯಲ್ಲಿರುವ ಕರ್ನಾಟಕ ನಾಗರೀಕ ಸೇವಾ (ನೇರ ನೇಮಕಾತಿ) ಸಾಮಾನ್ಯ ನಿಯಮಗಳು 2021 ರಲ್ಲಿ ಗ್ರೂಪ್ 'ಸಿ' ಹುದ್ದೆಗಳನ್ನು ತಾಂತ್ರಿಕ / ತಾಂತ್ರಿಕೇತರ ಹುದ್ದೆಗಳೆಂದು ವರ್ಗೀಕರಿಸಿ ತಾಂತ್ರಿಕ ಹುದ್ದೆಗಳಿಗೆ ಸಂಬಂಧಿಸಿದಂತೆ ಒಂದು ನಿರ್ದಿಷ್ಟ ಪತ್ರಿಕೆಯನ್ನು ನಿಗದಿಪಡಿಸುವಂತೆ ಕೋರಿದೆ.

ಮುಂದುವರೆದು, ಆಯೋಗವು ಅಧಿಸೂಚಿಸಲಾದ ಒಂದೇ ಪಠ್ಯಕ್ರಮವಿರುವ ವಿವಿಧ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಒಂದು ಹುದ್ದೆಯ ಅಂತಿಮ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾದ ಅಭ್ಯರ್ಥಿಯೇ ವಿವಿಧ ಹುದ್ದೆಗಳ ಅಂತಿಮ ಆಯ್ಕೆಪಟ್ಟಿ / ಹೆಚ್ಚುವರಿ ಆಯ್ಕೆಪಟ್ಟಿಯಲ್ಲಿ ಆಯ್ಕೆಯಾಗುವ ಸಂಭವವಿದ್ದು, ಆಯ್ಕೆಯಾದ ಅಭ್ಯರ್ಥಿಗಳೇ ಪುನರಾವರ್ತಿತರಾಗುತ್ತಾರೆ. ಆದ್ದರಿಂದ ಹಲವಾರು ಅಭ್ಯರ್ಥಿಗಳು ಮನವಿ ಸಲ್ಲಿಸಿ ಒಂದಕ್ಕಿಂತ ಹೆಚ್ಚು ಹುದ್ದೆಗಳಿಗೆ ಆಯ್ಕೆಯಾಗುವ ಅಭ್ಯರ್ಥಿಗಳಿಂದ ಅವರುಗಳು ಆಯ್ಕೆಯಾಗ ಬಯಸುವ ಹುದ್ದೆಯ ಆದ್ಯತೆಯನ್ನು ಪಡೆದು ಆಯ್ಕೆಪಟ್ಟಿ ಸಿದ್ದಪಡಿಸುವಂತೆ ಮನವಿ ಸಲ್ಲಿಸಿರುತ್ತಾರೆ. ಆದ್ದರಿಂದ FDA ಮತ್ತು SDA ಹುದ್ದೆಗಳಿಗೆ ಆದ್ಯತೆ ಪಡೆಯಲಾಗುತ್ತಿರುವ ರೀತಿಯಲ್ಲಿಯೇ ವಿವಿಧ ಇಲಾಖೆಯ ಗ್ರೂಪ್ 'ಸಿ' ಹುದ್ದೆಗಳಿಗೂ ಆದ್ಯತೆ ಪಡೆಯಲು ನಿಯಮಗಳಲ್ಲಿ ತಿದ್ದುಪಡಿ ಮಾಡಿದಲ್ಲಿ ಆಯ್ಕೆಪಟ್ಟಿಯಲ್ಲಿ ಅಭ್ಯರ್ಥಿಗಳ ಪುನರಾವರ್ತನೆಯನ್ನು ತಪ್ಪಿಸಿ ಅಧಿಸೂಚಿಸಲಾದ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲು ಅನುವಾಗುತ್ತದೆ.

ಆದ್ದರಿಂದ ದಿ:05-03-2021 ರಂದು ಜಾರಿಗೊಳಿಸಿರುವ ಕರ್ನಾಟಕ ನಾಗರೀಕ ಸೇವಾ (ನೇರ ನೇಮಕಾತಿ) ಸಾಮಾನ್ಯ ನಿಯಮಗಳು 2021 ರಲ್ಲಿ ಗ್ರೂಪ್ 'ಸಿ' ಹುದ್ದೆಗಳನ್ನು ತಾಂತ್ರಿಕ / ತಾಂತ್ರಿಕೇತರ ಹುದ್ದೆಗಳೆಂದು ವರ್ಗೀಕರಿಸಿ ತಾಂತ್ರಿಕ ಹುದ್ದೆಗಳಿಗೆ ಸಂಬಂಧಿಸಿದಂತೆ ಒಂದು ನಿರ್ದಿಷ್ಟ ಪತ್ರಿಕೆಯನ್ನು ನಿಗದಿಪಡಿಸುವ ಬಗ್ಗೆ ಹಾಗೂ ವಿವಿಧ ಇಲಾಖೆಯ ಗ್ರೂಪ್ 'ಸಿ' ಹುದ್ದೆಗಳಿಗೆ ಆದ್ಯತೆ ಪಡೆಯಲು ನಿಯಮಗಳಲ್ಲಿ ತಿದ್ದುಪಡಿ ಮಾಡುವ ಸಂಬಂಧ ಪುನರಾವಲೋಕಿಸುವಂತೆ ಹಾಗೂ ಅಗತ್ಯ ಕ್ರಮವಹಿಸುವಂತೆ ಕೋರಲಾಗಿದೆ.

ತಮ್ಮ ವಿಶ್ವಾಸಿ,

**(ಸುರಳ್ಕರ್ ವಿಕಾಸ್ ಕಿಶೋರ್)**
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ.